| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 259 (419) |
| ಸದಸ್ಯರ ಹೆಸರು: | ಶ್ರೀ ಅರುಣ್ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 13.02.2019 |
| ಉತ್ತರಿಸುವವರು: | ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಪ ವಲಯ ಅರಣ್ಯಾಧಿಕಾರಿ ವೃಂದದ ರಿಕ್ತಸ್ಥಾನವಹಿಯ ನಿರ್ವಹಣೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಅರ್ಜಿಗಳು ಸ್ವೀಕೃತವಾಗಿದೆಯೇ; ಸ್ವೀಕೃತವಾಗಿದ್ದರೆ, ಅರ್ಜಿಗಳ ಮಾಹಿತಿಯನ್ನು ನೀಡುವುದು. | - ಹೌದು –<br>ಉಪ ವಲಯ ಅರಣ್ಯಾಧಿಕಾರಿ ವೃಂದದ ರಿಕ್ತಸ್ಥಾನವಹಿಯ ನಿರ್ವಹಣೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಶ್ರೀ ಡಿ.ಎಸ್. ಗುರುರಾಜ್, ಕೊಪಿನಕೆರೆ ಬಳ್ಳಾರಿ, ಶ್ರೀ ಅಶೋಕ, ಶ್ರೀರಾಂಪುರ, ಬೆಂಗಳೂರು, ಶ್ರೀ ಜಗದೀಶ್, ಕೂಡಲಗಿ, ಬಳ್ಳಾರಿ ಮತ್ತು ಶ್ರೀ ರಂಜಿತ್‌ಕುಮಾರ್, ಹೆಬ್ಬಾಳ, ಬೆಂಗಳೂರು ಇವರು ಈ ಕುರಿತಂತೆ ಅರ್ಜಿಯನ್ನು ನೀಡಿರುತ್ತಾರೆ. |
| ಆ) | ಅಕ್ರಮ ರಿಕ್ತ ಸ್ಥಾನದಿಂದ ಮತ್ತು ನಿಯಮಬಾಹಿರವಾಗಿ ಪೂರ್ವಾನ್ವಯವಾಗುವಂತೆ ಮುಂಬಡ್ತಿ ನೀಡಿ ಪ್ರಸ್ತುತ ಉಪ ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರವನ್ನು ನೀಡುವುದು ಮತ್ತು ಇವರಿಗೆ ಪ್ರಸ್ತುತ ಪಾವತಿಸುತ್ತಿರುವ ಸಂಬಳದಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ಹೊರೆಯ ಪ್ರಮಾಣ ಎಷ್ಟು; | (see below) |
| ಇ) | ಅಕ್ರಮ ರಿಕ್ತಸ್ಥಾನದಿಂದ ಮತ್ತು ನಿಯಮಬಾಹಿರವಾಗಿ ಪೂರ್ವಾನ್ವಯವಾಗುವಂತೆ ಮುಂಬಡ್ತಿ ನೀಡಿರುವುದರಿಂದ ಉಪ ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಅಕ್ರಮವಾಗಿ ಜೇಷ್ಠತೆ ಪಡೆದು ವಲಯ ಅರಣ್ಯಾಧಿಕಾರಿ ಹುದ್ದೆಗೆ ತಾತ್ಕಾಲಿಕ ಮತ್ತು ಸ್ಥಾನವನ್ನ ಮುಂಬಡ್ತಿ ಪಡೆದಿರುವ ನೌಕರರ ಸಂಖ್ಯೆ ಎಷ್ಟು; ಇದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ಹೊರೆಯ ಪ್ರಮಾಣ ಎಷ್ಟು; | (see below) |

Answer to ಆ) and ಇ):

| ವೃತ್ತ | ಅನಧಿಕೃತ ರಿಕ್ತಸ್ಥಾನಗಳ ಸಂಖ್ಯೆ |
|---|---|
| ಬೆಳಗಾವಿ | 02 |
| ಚಾಮರಾಜನಗರ | 01 |
| ಧಾರವಾಡ | 03 |
| ಕೆನರಾ | 01 |
| ಮೈಸೂರು | 03 |
| ಶಿವಮೊಗ್ಗ | 14 |
| ಒಟ್ಟು | 24 |

ಮೇಲ್ಕಂಡ ಒಟ್ಟು 24 ಹುದ್ದೆಗಳು ಅನಧಿಕೃತ ರಿಕ್ತಸ್ಥಾನವೆಂದು ಮಾಹಿತಿ ನೀಡಲಾಗಿರುತ್ತದೆ. ಈ ಕುರಿತಂತೆ ವೃತ್ತ ಕಛೇರಿಗಳಿಂದ ಸ್ವೀಕೃತವಾದ ಮಾಹಿತಿಯನ್ನು ಮರು ಪರಿಶೀಲಿಸುವ ಸಲುವಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ರವರ ಅಧ್ಯಕ್ಷತೆಯಲ್ಲಿ ದಿ:10.07.2019 ರಂದು ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ಸಮಿತಿಯು ವೃತ್ತ ಕಛೇರಿಗಳಿಂದ ಸ್ವೀಕೃತವಾದ ಮಾಹಿತಿಯನ್ನು ಪರಿಶೀಲಿಸಿ ವಿವರವಾದ ವರದಿಯನ್ನು ತಯಾರಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಗೆ ಸಲ್ಲಿಸಿರುತ್ತಾರೆ. ಈ ವೃತ್ತಗಳಿಗೆ ಸಂಬಂಧಪಟ್ಟಂತೆ ನಿಗಧಿತ ಸಂಖ್ಯೆಯ ಬಡ್ತಿ ಕೋಟಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ತುಂಬಲ್ಪಟ್ಟ ಹುದ್ದೆಗಳನ್ನು ನಿವೃತ್ತಿ, ಬಡ್ತಿ, ಮರಣ ಇತ್ಯಾದಿ ಕಾರಣಗಳಿಂದ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ಎದುರಾಗಿ, ಹೊಂದಾಣಿಕೆ ಮಾಡಿ ಸಮಬಲಗೊಳಿಸಿದೆ. ಅದರಂತೆ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ಹುದ್ದೆಯಲ್ಲಿ ಅಕ್ರಮವಾಗಿ ಯಾವುದೇ ರಿಕ್ತಸ್ಥಾನಗಳನ್ನು ಪರಿಗಣಿಸಿರುವುದಿಲ್ಲ.

........2

| | | |
|---|---|---|
| | | ಅಲ್ಲದೇ ಅಕ್ರಮವಾಗಿ ಯಾರಿಗೂ ಪೂರ್ವಾನ್ವಯವಾಗಿ ಜೇಷ್ಠತೆಯನ್ನು ನಿಗಧಿಪಡಿಸಿರುವುದಿಲ್ಲ ಮತ್ತು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯು ಆಗಿರುವುದಿಲ್ಲ. ಯಾವುದೇ ನೌಕರರಿಗೆ ನಿಯಮ ಬಾಹಿರವಾಗಿ ಪೂರ್ವಾನ್ವಯವಾಗುವಂತೆ ಮುಂಬಡ್ತಿ ನೀಡಿರುವುದಿಲ್ಲ. |
| ಈ) | ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ಮುಂಬಡ್ತಿ ನೇಮಕಾತಿ ಮತ್ತು ರಿಕ್ತಸ್ಥಾನ ವಹಿಯಲ್ಲಿನ ಅಕ್ರಮದ ಪ್ರಮಾಣವನ್ನು ಪತ್ತೆ ಹಚ್ಚಲು ಮತ್ತು ಸರ್ಕಾರ ಅಕ್ರಮ ಮುಂದುವರಿಯದಂತೆ ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮುಂಬಡ್ತಿ, ನೇಮಕಾತಿ ಮತ್ತು ರಿಕ್ತಸ್ಥಾನ ವಹಿಯನ್ನು ನಿಯಮಾನುಸಾರ ನಿರ್ವಹಿಸುವ ಕುರಿತು ಸೂಚಿಸಲಾಗಿರುತ್ತದೆ. ಆದುದರಿಂದ, ಅಕ್ರಮ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ಅಪಜೀ 41 ಅಅಸೇ 2019

(ಉಮೇಶ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು